ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಈ ಯೋಜನೆಯಲ್ಲಿ ಕೆಳಕಂಡ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

1. ನಗರ ಸ್ತ್ರೀಶಕ್ತಿ (ಬಡತನ ನಿರ್ಮೂಲನೆ).
2. ನಗರ ನೈರ್ಮಲ್ಯ (ಘನತ್ಯಾಜ್ಯ ವಸ್ತುಗಳ ನಿರ್ವಹಣೆ)
3. ನಗರ ಬಡಜನತೆಗೆ ಶೌಚಾಲಯ
4. ಆಸ್ತಿ ತೆರಿಗೆಯಲ್ಲಿ ಸುಧಾರಣೆ ಹಾಗೂ ತೆರಿಗೆ ಸಂಬಂಧಿತ ಭೌಗೋಳಿಕ ಮಾಹಿತಿ ಪದ್ಧತಿ.
5. ಗಣಕೀಕರಣ ನಿಧಿ ಆಧಾರಿತ ಲೆಕ್ಕಪದ್ಧತಿ.

ಇ) ಆಗಸ್ಟ್ 2003 ರಿಂದ ಕಾರ್ಯಗತಗೊಳಿಸಲಾಗುವುದು.

ಈ) ಈ ಯೋಜನೆಯ ಮುಖ್ಯಾಂಶಗಳೆಂದರೆ ಸ್ಥಳೀಯ ಸಂಸ್ಥೆಗಳಲ್ಲಿನ ಸಂಪನ್ಮೂಲಗಳ ಕ್ರೋಢೀಕರಣ, ಮೂಲಭೂತ ಸೌಕರ್ಯಗಳ ನಿರ್ಮಾಣ ಮತ್ತು ನಿರ್ವಹಣೆ, ನಗರ ಬಡತನ ನಿರ್ಮೂಲನೆ, ಪಾರದರ್ಶಕತೆ ಮತ್ತು ಭಾಗವಹಿಸುವಿಕೆ ಉತ್ತಮ ಆಡಳಿತ ಹಾಗೂ ಸ್ಥಳೀಯ ಲೆಕ್ಕ ನಿರ್ವಹಣೆಗಳು ಕಾರ್ಯಸೂಚಿಯಲ್ಲಿನ ಪ್ರಮುಖ ಅಂಶಗಳಾಗಿವೆ.

ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆ ಸರ್ಕಾರ, ಪೌರಾಡಳಿತ ನಿರ್ದೇಶನಾಲಯ ಮತ್ತು ಆಯ್ದ 30 ಸ್ಥಳೀಯ ಸಂಸ್ಥೆಗಳ ಮೇಲೆ ಇದೆ.

ರಾಜ್ಯದಲ್ಲಿರುವ ನಗರಸಭೆಗಳಿಗೆ ಸಂಪನ್ಮೂಲ ಕ್ರೋಢೀಕರಣ

4388 (5328) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ನಗರಸಭೆಗಳಲ್ಲಿ ಸಂಪನ್ಮೂಲದ ಕೊರತೆಯಿಂದಾಗಿ ನಾಗರೀಕರಿಗೆ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸಲು ಸಾಧ್ಯವಾಗದೇ ಇರುವುದನ್ನು ಸರ್ಕಾರವು ಮನಗಂಡಿದೆಯೇ;

ಆ) ಸಂಪನ್ಮೂಲದ ಕ್ರೊಢೀಕರಣಕ್ಕೆ ಮಾರ್ಗೋಪಾಯವನ್ನು ರೂಪಿಸಿದ್ದಲ್ಲಿ, ಅದರ ವಿವರಗಳೇನು;

ಇ) ರಾಜ್ಯದಲ್ಲಿನ ನಗರಸಭೆಗಳ ಅಭಿವೃದ್ಧಿ ಬಗೆಗೆ ಯೋಜನೆಯನ್ನೇನಾದರೂ ಸಿದ್ಧಿಪಡಿಸಲಾಗಿದೆಯೇ;

ಈ) ರಾಜ್ಯದಲ್ಲಿನ ನಗರಗಳ ವ್ಯವಸ್ಥಿತ ಬೆಳವಣಿಗೆಗೆ ಮತ್ತು ನಿಗದಿತ ಯೋಜನೆಯಂತೆ ಅಭಿವೃದ್ಧಿಪಡಿಸಲು ಸರ್ಕಾರವು ಹಮ್ಮಿಕೊಂಡಿರುವ ಕ್ರಮಗಳೇನು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಸ್ವಯಂಘೋಷಿತ ಆಸ್ತಿ ತೆರಿಗೆಯನ್ನು ಜಾರಿಗೊಳಿಸಲಾಗಿದೆ.

ಇ) ಹೌದು.

ಈ) ನಿರ್ಮಲ ನಗರದ ಯೋಜನೆಯಡಿ ಬಡತನ ನಿರ್ಮೂಲನೆ, ಘನತ್ಯಾಜ್ಯ ವಸ್ತುಗಳ ವಿಸರ್ಜನೆ, ಗಣಕೀಕರಣ, ಶೌಚಾಲಯಗಳ ನಿರ್ಮಾಣ ಮತ್ತು ಸ್ತ್ರೀಶಕ್ತಿ ಯೋಜನೆಯನ್ನು ರೂಪಿಸಲಾಗುತ್ತಿದೆ.

ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಹಾಗೂ ಹೆಚ್ಚುವರಿ ಸಿಬ್ಬಂದಿ

4389 (5105) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಆರ್ಥಿಕ ಸಮಸ್ಯೆ ಇರುವುದು ನಿಜವೇ; ಹಾಗಾದರೆ ಇಲಾಖೆಗಳಲ್ಲಿ ಅನಗತ್ಯ ಹುದ್ದೆಗಳು ಮತ್ತು ಹೆಚ್ಚಿನ ಸಿಬ್ಬಂದಿಗಳು ಇದ್ದರೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು;

ಆ) ಪ್ರತಿ ಇಲಾಖೆಯಲ್ಲಿರುವ ಅನಾವಶ್ಯಕವಾದ ಸಿಬ್ಬಂದಿಯ ವಿವರ ಮತ್ತು ಅವರನ್ನು ಕಡ್ಡಾಯವಾಗಿ ನಿವೃತ್ತಿಪಡಿಸುವ ವಿವರ ನೀಡುವುದು;

ಇ) ಆಡಳಿತದಲ್ಲಿ ವರ್ಗಾವಣೆಗಳು ಹುದ್ದೆವಾರು ಸರಿಯಾದ ಅವಧಿಯಲ್ಲಿ ನಡೆಯುವಂತೆ ಹಾಗೂ ನೌಕರ ವರ್ಗ ವೃತ್ತಿ ಗೌರವದೊಂದಿಗೆ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಲು ಯಾವ ಸೂತ್ರ ಬೇಕಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಯ ನಿಯಮ 285(4)ರ ಪ್ರಕಾರ ಸಾರ್ವಜನಿಕ ಹಿತಾಸಕ್ತಿಗೆ ಉಪಯುಕ್ತವಾಗುವ ಹಂತವನ್ನು ಮೀರಿರುವ ಸರ್ಕಾರಿ ನೌಕರರನ್ನು, ಅವರು 20 ವರ್ಷಗಳ ಅರ್ಹತಾದಾಯಕ ಸೇವೆಯನ್ನು ಪೂರ್ಣಗೊಳಿಸಿದ ನಂತರ ಅಥವಾ 50 ವರ್ಷ ವಯಸ್ಸು ಪೂರ್ಣಗೊಳಿಸಿದ ನಂತರ ಯಾವುದೇ ಅವಧಿಯಲ್ಲಿ ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಕಡ್ಡಾಯ ನಿವೃತ್ತಿಗೊಳಿಸಬಹುದಾಗಿದೆ. ಅದರನ್ವಯ ಪರಿಶೀಲಿಸಿ ಈ ಕೆಳಕಂಡ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಗೊಳಿಸಲಾಗಿದೆ.

1. ಶ್ರೀ ಎ.ಸಿ. ಫರ್ನಾಂಡೀಸ್,
   ಅಬಕಾರಿ ಉಪ ಅಧೀಕ್ಷಕರು,
   ಅಬಕಾರಿ ಇಲಾಖೆ.
2. ಶ್ರೀ ಪಿ. ಹನುಮಂತಪ್ಪ,
   ಉಪ ನಿರ್ದೇಶಕರು,
   ಪದವಿ ಪೂರ್ವ ಶಿಕ್ಷಣ.
3. ಶ್ರೀ ಜಾಫರ್ ಮೊಯಿನುದ್ದೀನ್.
   ಉಪ ನಿರ್ದೇಶಕರು,
   ಪದವಿ ಪೂರ್ವ ಶಿಕ್ಷಣ.